ಚರ್ಚೆ ಆಗಬೇಕೆಂದು ಹೇಳಿದ್ದೇವೆ. ನಾವು ಮೊದಲು ಸೂಚನೆಯನ್ನು ಕೊಟ್ಟಿದ್ದೇವೆ. ಪ್ರೊಸೀಜರ್ ಆಫ್ ಪಾರ್ಲಿಮೆಂಟರಿ ಪ್ರಾಕ್ಟೀಸ್ ಏನಿದೆ ಅದರ ಪ್ರಕಾರ ತಾವು ಅವಕಾಶ ಮಾಡಿ ಕೊಟ್ಟರೆ ಅವರು ಮಾತನಾಡಲಿ. ನಾವೇ ಎಲ್ಲವನ್ನೂ ಗುತ್ತಿಗೆಗೆ ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೆ ? ಅವರೂ ಮಾತನಾಡಲಿ. ಯಾರು ಬೇಡ ಅನ್ನುತ್ತಾರೆ ?

ಶ್ರೀ ಜಗದೀಶ ಶೆಟ್ಟರ್ : ಇದು ಸಾರ್ವಜನಿಕವಾದ ವಿಚಾರ. ಅದರ ಬಗ್ಗೆ ಎಲ್ಲರೂ ಕೂಡ ಮಾತನಾಡಲಿ.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ರೋಣದಲ್ಲಿ ಆಯುರ್ವೇದ ಆಸ್ಪತ್ರೆ

407 - ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್ (ರೋಣ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಈ ವರ್ಷ ಎಷ್ಟು ಆಯುರ್ವೇದ ಆಸ್ಪತ್ರೆಗಳನ್ನು ಆರಂಭಿಸಲು ಸರ್ಕಾರ ಅನುಮತಿ ನೀಡಿದೆ ?

ಆ) ಗದಗ್ ಜಿಲ್ಲೆ ರೋಣ ನಗರದಲ್ಲಿ 10 ಹಾಸಿಗೆಗಳ ಆಯುರ್ವೇದ ಆಸ್ಪತ್ರೆ ಪ್ರಾರಂಭಿಸಲು ಸ್ಥಳ ಪರಿಶೀಲನೆ ಇತರೆ ಅಗತ್ಯ ಕ್ರಮ ತೆಗೆದುಕೊಂಡು ಜಿಲ್ಲಾ ಪಂಚಾಯತ್ ಗದಗ್ ಇವರಿಂದ ಪ್ರಸ್ತಾವನೆ ಸಲ್ಲಿಸಿದ್ದು ನಿಜವೆ ? ಹಾಗಿದ್ದಲ್ಲಿ ಈ ಕುರಿತು ಸರಕಾರ ಕೈಗೊಂಡ ಕ್ರಮಗಳಾವುವು ?

ಇ) ಗದಗ್ ಜಿಲ್ಲೆ ಕೋಟುಮಚಗಿ ಗ್ರಾಮದಲ್ಲಿ ಹೆರಿಗೆ ಆಸ್ಪತ್ರೆ ಪ್ರಾರಂಭಿಸಲು ಸಲ್ಲಿಸಿದ ಪ್ರಸ್ತಾವನೆಗೆ ಸರಕಾರ ಕೈಗೊಂಡ ಕ್ರಮಗಳೇನು ?

ಡಾ|| ಎ.ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 2000-2001ನೇ ಸಾಲಿನಲ್ಲಿ 1 ಜಿಲ್ಲಾ ಮಟ್ಟದ ಹಾಗೂ 5 ತಾಲ್ಲೂಕು ಮಟ್ಟದ ಆಯುರ್ವೇದ ಆಸ್ಪತ್ರೆಗಳನ್ನು ತೆರೆಯಲು ಸರ್ಕಾರವು ಅನುಮತಿ ನೀಡಿದೆ.

ಆ) ಹೌದು. ಜಿಲ್ಲಾ ಪಂಚಾಯತ್‌ನ ಸ್ಥಾಯಿ ಸಮಿತಿ ಅನುಮೋದನೆಯೊಡನೆ ಪ್ರಸ್ತಾವನೆ ಸ್ವೀಕೃತವಾಗಿದೆ. ಆದರೆ ಪ್ರಸ್ತಾಪಿತ ಲೆಕ್ಕಶೀರ್ಷಿಕೆಯಡಿ ಆಯವ್ಯಯ ಇಲ್ಲದ ಕಾರಣ ಆಯವ್ಯಯ ಅವಕಾಶ ತಿಳಿಸಿ ಪ್ರಸ್ತಾಪಿಸಲು ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳನ್ನು ಕೋರಲಾಗಿದೆ. ಅವರಿಂದ ಪರಿಷ್ಕೃತ ಪ್ರಸ್ತಾವನೆ ಬಂದ ನಂತರ ಮಂಜೂರಾತಿಗೆ ಕ್ರಮ ಕೈಗೊಳ್ಳಲಾಗುವುದು.

೫) ಗದಗ್ ಜಿಲ್ಲೆ ಕೋಟ ಮುಚಗಿ ಗ್ರಾಮದಲ್ಲಿ 10 ಹಾಸಿಗೆಗಳ ಪ್ರಸೂತಿ ಗೃಹ ಮಂಜೂರು ಮಾಡಲು ಜಿಲ್ಲಾ ಪಂಚಾಯತ್ ಅನುಮೋದನೆಯೊಂದಿಗೆ ಪ್ರಸ್ತಾಪನೆ ಬಂದಿರುವುದಿಲ್ಲ.

ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್ : ಸನ್ಮಾನ್ಯ ಅಧಕ್ಷರೆ, ಸನ್ಮಾನ್ಯ ಮಂತ್ರಿಗಳು ನಮ್ಮ ರಾಜ್ಯದಲ್ಲಿ ಪ್ರಸ್ತುತ ವರ್ಷದಲ್ಲಿ ತಾಲ್ಲೂಕು ಮಟ್ಟದ ಐದು ಆಯುರ್ವೇದ ಆಸ್ಪತ್ರೆಗಳನ್ನು ಪ್ರಾರಂಭಿಸಿದ್ದಾರೆ ಎಂಬ ಮಾತನ್ನು ತಿಳಿಸಿದ್ದಾರೆ. ಅದರಲ್ಲಿ ನಮ್ಮ ರೋಣ ನಗರ ಸೇರಿದೆಯೇ ಎನ್ನುವುದರ ಬಗ್ಗೆ ಸ್ಪಷ್ಟವಾಗಿ ಹೇಳಿಲ್ಲ. ಆದರೂ ಕೂಡ ಅವರು ಜಿಲ್ಲಾ ಪಂಚಾಯಿತಿಯಿಂದ ಕೆಲವೊಂದು ಮಾಹಿತಿ ಬಂದಮೇಲೆ ಆಸ್ಪತ್ರೆಯನ್ನು ಕೊಡುತ್ತೇವೆ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಪ್ರಶ್ನೆ ಕೇಳಿರುವುದು ಏನೆಂದರೆ ಈ ವರ್ಷದ ಅನುದಾನದಲ್ಲಿ ಎರಡೂವರೆ ಲಕ್ಷ ರೂಪಾಯಿಗಳನ್ನು ಜಿಲ್ಲಾ ಪಂಚಾಯತಿ ಮೂಲಕ ಕೊಡುವುದಕ್ಕೆ ಆಗುತ್ತದೆಯೇ, ಇಲ್ಲವೆ ಎಂಬುವ ಬಗ್ಗೆ ಇದು ಸಣ್ಣ ಪ್ರಮಾಣದ ಅನುದಾನ ಇದೆ. ಆ ಅನುದಾನವನ್ನು ನಮ್ಮ ಗದಗ್ ಜಿಲ್ಲಾ ಪಂಚಾಯತ್ ಯಾವುದೇ ಪರಿಸ್ಥಿತಿಯಲ್ಲಿ ಕೂಡ ಅದನ್ನು ಒದಗಿಸಿಕೊಡಬೇಕು ಎನ್ನುವ ವಿಚಾರದಲ್ಲಿ ಮಾನ್ಯ ಮಂತ್ರಿಗಳಿಗೆ ಗೊತ್ತಿರುವಂತೆ ಈಗಾಗಲೇ ಅಲ್ಲಿ ಆಸ್ಪತ್ರೆಗೆ ಬೇಕಾದ ಕಟ್ಟಡ ಮತ್ತು ಬೇರೆ ಎಲ್ಲ ವ್ಯವಸ್ಥೆಯನ್ನು ಪೂರೈಸಿದ್ದಾರೆ. ಆದ್ದರಿಂದ ಅದಕ್ಕೆ ಶೀಘ್ರ ಮಂಜೂರಾತಿಯನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಅವರನ್ನು ಒತ್ತಾಯಿಸುತ್ತಿದ್ದೇನೆ.

ಡಾ|| ಎ.ಬಿ. ಮಾಲಕರೆಡ್ಡಿ : ಈ ಆಯುರ್ವೇದ ಆಸ್ಪತ್ರೆಯನ್ನು ಸ್ಥಾಪನೆ ಮಾಡಬೇಕಾದರೆ ಮೊದಲು ಜಿಲ್ಲಾ ಪಂಚಾಯತ್‌ನವರು ಪ್ರಸ್ತಾಪನೆಯನ್ನು ಸರ್ಕಾರಕ್ಕೆ ಕಳಿಸಬೇಕಾಗುತ್ತದೆ. ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರತಕ್ಕಂಥ ಆಸ್ಪತ್ರೆಗಳು ಅದು ಆಲೋಪತಿ ಇರಬಹುದು ಅಥವಾ ಆಯುರ್ವೇದ ಆಸ್ಪತ್ರೆ ಇರಬಹುದು ಪ್ರತಿಯೊಂದು ಲೆಕ್ಕ ಶೀರ್ಷಿಕೆಯಲ್ಲಿ ಹಣವನ್ನು ಒದಗಿಸಿಕೊಡಬೇಕಾಗುತ್ತದೆ. ಅವರು ಕೇವಲ ಪ್ರಸ್ತಾವನೆಯನ್ನು ಕಳಿಸಿದ್ದಾರೆ. ಅದಕ್ಕೆ ಎಷ್ಟು ಹಣ ಒದಗಿಸಿದ್ದೇವೆ ಎಂದು ಅವರು ಅದರಲ್ಲಿ ತಿಳಿಸಿಲ್ಲ. ಅದಕ್ಕಾಗಿ ಪುನಃ ಆ ಪ್ರಸ್ತಾವನೆಯನ್ನು ವಾಪಸ್ಸು ಕಳಿಸಿದ್ದೇವೆ. ಜಿಲ್ಲಾ ಪಂಚಾಯಿತಿಯಿಂದ ಉತ್ತರ ಬಂದ ಕೂಡಲೇ ಸರ್ಕಾರ ಖಂಡಿತ ಅದನ್ನು ಪರಿಶೀಲನೆ ಮಾಡುತ್ತದೆ.

ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಪರಿಶೀಲನೆ ವ್ಯವಸ್ಥೆ ಬೇಡ. ಸನ್ಮಾನ್ಯ ಮಂತ್ರಿಗಳು ಮಂಜೂರಾತಿಯನ್ನು ಕೊಡುವ ಪ್ರಸ್ತಾವ ಮಾಡಿದರೆ ಒಳ್ಳೆಯದಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು : ಇದು ರೋಣದ ಆಯುರ್ವೇದ ಆಸ್ಪತ್ರೆ ಬಗ್ಗೆ ಇರುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದು ರಾಜ್ಯದಲ್ಲಿ ಇರುವ ಆಸ್ಪತ್ರೆಗಳ ಬಗ್ಗೆ ಪ್ರಶ್ನೆ ಇರುವುದರಿಂದ ನಾನು ಮಾನ್ಯ ಆರೋಗ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಇದು ರೋಣದಲ್ಲಿ ಆಯುರ್ವೇದ ಆಸ್ಪತ್ರೆ ಬಗ್ಗೆ .....

ಶ್ರೀ ಪಿ.ಜಿ.ಆರ್. ಸಿಂಧ್ಯ : 'ಅ' ಪ್ರಶ್ನೆಯನ್ನು ನೋಡಿ. ರಾಜ್ಯದಲ್ಲಿ ಎಷ್ಟು ಆಯುರ್ವೇದ ಆಸ್ಪತ್ರೆಗಳು ಎನ್ನುವುದಕ್ಕೆ ನಾನು ಕೇಳುತ್ತಿದ್ದೇನೆ. ಇದು ಬರೀ ರೋಣ ಆಗಿದ್ದರೆ ನಾನು ಕೇಳುತ್ತಿರಲಿಲ್ಲ. ನಾನು ಮಾನ್ಯ ಆರೋಗ್ಯ ಸಚಿವರಲ್ಲಿ ವಿನಂತಿಸಿಕೊಳ್ಳುವುದು ಏನೆಂದರೆ, ಈಗ ಬಹಳಷ್ಟು ಹುದ್ದೆಗಳು ಖಾಲಿ ಇವೆ. ಅಸಿಸ್ಟೆಂಟ್ ಸರ್ಜನ್ಸ್, ಲೇಡಿ ಮೆಡಿಕಲ್ ಆಫೀಸರ್ಸ್, ಇವರನ್ನು ರಿಕ್ರೂಟ್‌ಮೆಂಟ್ ಮಾಡಿಕೊಳ್ಳುವುದರಲ್ಲಿ ಸಹಿತ ವಿಳಂಬವಾಗಿದೆ. ನಾವು ಸರ್ವಪಕ್ಷಗಳ ಸಭೆಯಲ್ಲಿ ಈ ಗ್ರಾಮೀಣ ಕೃಪಾಂಕಕ್ಕೆ ವಿನಾಯಿತಿ ಕೊಟ್ಟಿದ್ದೇ ಇದಕ್ಕೆ. ಲೇಡಿ ಮೆಡಿಕಲ್ ಆಫೀಸರ್ಸ್, ಅಸಿಸ್ಟೆಂಟ್ ಸರ್ಜನ್ಸ್ ಮತ್ತು ಆಯುರ್ವೇದ ಡಾಕ್ಟರ್‌ಗಳನ್ನು ನೇಮಕ ಮಾಡಿಕೊಳ್ಳಲಿ ಎಂದು ಹೇಳಿ ನಾವು ಈ ವಿನಾಯಿತಿಯನ್ನು ಕೊಟ್ಟಿದ್ದೇವೆ. ಮಾನ್ಯ ಅಧ್ಯಕ್ಷರೆ, ಇವತ್ತು ಇಡೀ ರಾಜ್ಯದಲ್ಲಿ ನಮ್ಮ ನಮ್ಮ ಕ್ಷೇತ್ರದಲ್ಲಿ ನಾಲ್ಕೈದು ಆಸ್ಪತ್ರೆಗಳಲ್ಲಿ ಡಾಕ್ಟರುಗಳು ಇಲ್ಲ. ಒಬ್ಬ ಡಾಕ್ಟರ್ ಮೂರು-ನಾಲ್ಕು ಆಸ್ಪತ್ರೆಗಳಿಗೆ ಹೋಗಬೇಕಾದಂಥ ಪರಿಸ್ಥಿತಿ ಇದೆ. ಹಿಂದೆ ನಮ್ಮ ಸರ್ಕಾರ ಇದ್ದಾಗ ಡೆಪ್ಯುಟಿ ಕಮೀಷನರ್ ಅವರಿಗೆ ಅಲ್ಲೇ ರಿಕ್ರೂಟ್‌ಮೆಂಟ್ ಮಾಡಿಕೊಂಡು ಆರೇಂಜ್‌ಮೆಂಟ್ ಮಾಡಿಕೊಳ್ಳುವುದಕ್ಕೆ ನಾವು ಅವಕಾಶವನ್ನು ಮಾಡಿಕೊಟ್ಟಿದ್ದೆವು. ಈಗ ಅದನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು ತೆಗೆದುಹಾಕಿದ್ದೀರಿ. ಅದನ್ನು ಮಾಡುವುದಕ್ಕೆ ಸಾಧ್ಯವೇ ಎಂದು ತಮ್ಮ ಮೂಲಕ ಮಾನ್ಯ ಆರೋಗ್ಯ ಸಚಿವರಲ್ಲಿ ಕೇಳುತ್ತೇನೆ.

ಡಾ॥ ಎ.ಬಿ. ಮಾಲಕರೆಡ್ಡಿ : ಸನ್ಮಾನ್ಯ ಸಿಂಧ್ಯಾರವರು ಹೇಳುವಂತಹ ಯಾವುದೇ ಆಲೋಪತಿ ಆಸ್ಪತ್ರೆಯಲ್ಲಿ ಕಾಂಟ್ರಾಕ್ಟ್ ಅಪಾಯಿಂಟ್‌ಮೆಂಟ್ ಮಾಡುವುದಕ್ಕೆ ವ್ಯವಸ್ಥೆ ಇದೆ. ಅದೇ ರೀತಿಯಲ್ಲಿ ಭಾರತೀಯ ವೈದ್ಯ ಪದ್ಧತಿಯಲ್ಲಿ ಕೂಡ ಈ ರೀತಿ ಅವಕಾಶ ಮಾಡಿಕೊಟ್ಟಿದೆ. ಜಿಲ್ಲಾಧಿಕಾರಿಗಳಿಗೆ ಸೂಚನೆ ಹೋಗಿದೆ. ಇನ್ನು ಒಂದು ತಿಂಗಳೊಳಗೆ ನೇಮಕಾತಿಯನ್ನು ಮಾಡುತ್ತೇವೆ. ಸರ್ಕಾರ ಪ್ರತಿಯೊಂದು ಜಿಲ್ಲಾಧಿಕಾರಿಗಳಿಗೂ ಆದೇಶವನ್ನು ಕೊಟ್ಟಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸರ್ಕಾರಿ ಆಜ್ಞೆಯಂತೆ ಜಿಲ್ಲಾಧಿಕಾರಿಗಳು ಲೇಡಿ ಮೆಡಿಕಲ್ ಆಫೀಸರ್, ಅಸಿಸ್ಟೆಂಟ್ ಸರ್ಜನ್ಸ್, ಆಯುರ್ವೇದ ಡಾಕ್ಟರ್ ಹುದ್ದೆಗಳು ಎಲ್ಲೆಲ್ಲಿ ಖಾಲಿ ಇವೆ ಅಲ್ಲೆಲ್ಲ ನೇಮಕ ಮಾಡಿಕೊಳ್ಳುವುದಕ್ಕೆ ನೀವು ಕೊಟ್ಟಿದ್ದೀರಿ. ಜನರಲ್ ಅಡ್ಮಿನಿಸ್ಟ್ರೇಶನ್ ಮಾತ್ರ ಜಿಲ್ಲಾಪಂಚಾಯತ್‌ಗೆ ಕೊಟ್ಟಿರತಕ್ಕದ್ದು. ರಿಕ್ರೂಟ್‌ಮೆಂಟ್ ಆಫ್ ಸ್ಟಾಫ್ ಏನಿದೆ ಅದು ಬಹಳ ಮುಖ್ಯ. ಅದನ್ನು ಡೆಪ್ಯುಟಿ ಕಮಿಷನರ್ ಅವರಿಗೆ ಕೊಡಬೇಕೆಂದು ಆಜ್ಞೆ ಇತ್ತು. ಅದನ್ನು ತಾತ್ಕಾಲಿಕವಾಗಿ ನಿಮ್ಮ ಸರ್ಕಾರ ಬಂದ ಮೇಲೆ ರದ್ದು ಮಾಡಿದ್ದೀರಿ. ಅದನ್ನು ಮತ್ತೆ ಮಾಡುವುದಕ್ಕೆ ಸಾಧ್ಯವೇ ಎಂದು ನಾನು ಕೇಳುತ್ತಿದ್ದೇನೆ. ಮಾಡುವುದಾದರೆ ಅದಷ್ಟು ಬೇಗ ಕೊನೆಯ ಪಕ್ಷ ಎರಡು ತಿಂಗಳ ಒಳಗಡೆ ದಯವಿಟ್ಟು ರಿಕ್ರೂಟ್‌ಮೆಂಟ್ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ ಇಲ್ಲದೇ ಹೋದರೆ ತಮಗೆ ಗೊತ್ತಿದೆ, ಅನೇಕ ಹಳ್ಳಿಗಳಲ್ಲಿ ಆಸ್ಪತ್ರೆ ಇರುವ ಕಡೆ ಡಾಕ್ಟರುಗಳು ಇಲ್ಲ.

ಡಾ॥ ಎ.ಬಿ. ಮಾಲಕರೆಡ್ಡಿ : ಮಾನ್ಯ ಸಿಂಧ್ಯರವರು ಹೇಳಿದ್ದು ನಿಜ. ತಾತ್ಕಾಲಿಕವಾಗಿ ಅದನ್ನು ಸ್ಥಗಿತಗೊಳಿಸಿದ್ದು ಅದಕ್ಕೆ ಕಾರಣ ಇಷ್ಟೇ. ಆಲೋಪತಿ ಸಿಸ್ಟಮ್‌ನಲ್ಲಿ 573 ಡಾಕ್ಟರ್‌ಗಳಿಗೆ ರೆಗ್ಯುಲರ್

ಅಪಾಯಿಂಟ್‌ಮೆಂಟ್ ಆಗಿತ್ತು. ಅವರಿಗೆ ಸ್ಥಾನ ಒದಗಿಸಿಕೊಡಬೇಕು. ಎಷ್ಟು ದಿವಸ ಎಂದು ಅವರು ಕಾಂಟ್ರಾಕ್ಟ್ ಮೇಲೆ ಕೆಲಸ ಮಾಡಲು ಸಾಧ್ಯ ? ಅದಕ್ಕಾಗಿ ಸ್ಥಗಿತಗೊಳಿಸಿದ್ದು. ಈಗಾಗಲೇ ಅನೇಕ ಕಡೆ ರೆಗ್ಯುಲರ್ ಅಪಾಯಿಂಟ್‌ಮೆಂಟ್ ಆಗಿರುವ ಡಾಕ್ಟರ್‌ಗಳು ರಿಪೋರ್ಟ್ ಮಾಡಿಕೊಂಡಿಲ್ಲ. ಆ ವೇಕನ್ಸಿಗಳನ್ನು ತೆಗೆದುಕೊಂಡು ಪುನಃ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಅಪಾಯಿಂಟ್‌ಮೆಂಟ್ ಮಾಡಬೇಕು ಎಂದು ಆಜ್ಞೆ ಹೋಗಿದೆ. ಆದೇ ರೀತಿ ಆಯುರ್ವೇದದಲ್ಲಿ ಕೂಡ 143 ಡಾಕ್ಟರ್‌ಗಳನ್ನು ಅಪಾಯಿಂಟ್ ಮಾಡಿದ್ದೇವೆ. ಅದು ಕೂಡ ರೆಗ್ಯುಲರ್ ಅಪಾಯಿಂಟ್‌ಮೆಂಟ್. ಇಲ್ಲಿಯೂ ಕೂಡ ವೇಕನ್ಸಿ ಪೊಸಿಶನ್ ತಿಳಿದುಕೊಂಡು ಅಪಾಯಿಂಟ್ ಮಾಡಿಕೊಳ್ಳಬೇಕು ಎಂದು ಆದೇಶವನ್ನು ಹೊರಡಿಸಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಆಲೋಪತಿ ಇರಬಹುದು. ಆಯುರ್ವೇದ ಇರಬಹುದು. ಈಗಾಗಲೇ ತಾವು ಈ ಕಾಂಟ್ರಾಕ್ಟ್ ಬೇಸಿಸ್ ಮೇಲೆ ನೇಮಕಾತಿ ಮಾಡಿಕೊಳ್ಳುವುದಕ್ಕೆ ಆದೇಶ ಮಾಡಿದ್ದೇನೆಂದು ಹೇಳಿದಿರಿ. ನೀವು ಆದೇಶ ಮಾಡುತ್ತಿರಿ. ಅವರು 15 ದಿವಸ ಕೂಡ ಇರುವುದಿಲ್ಲ. ಆ ಜಾಗಗಳು ಖಾಲಿಯೇ ಇವೆ. ಅದಕ್ಕೆ ರೆಗ್ಯುಲರ್ ಆಗಿ ತುಂಬುತ್ತೀರಾ? ಈ ರೀತಿ ಮಾಡದೇ ಇದ್ದರೆ, ಹಳ್ಳಿಗಳಲ್ಲಿ ಡಾಕ್ಟರುಗಳೇ ಇರುವುದಿಲ್ಲ. ಈ ವಿಚಾರ ಮಾನ್ಯ ತಿಮ್ಮಪ್ಪನವರಿಗೂ ಗೊತ್ತಿದೆ. ತಮ್ಮ ಕ್ಷೇತ್ರದಲ್ಲೂ ಡಾಕ್ಟರುಗಳು ಇಲ್ಲವೆಂದು ನಾವು ಕೇಳಿದ್ದೇವೆ. ಆದ್ದರಿಂದ, ಡಾಕ್ಟರುಗಳನ್ನು ರೆಗ್ಯುಲರ್ ಆಗಿ ತುಂಬತಕ್ಕಂಥ ವ್ಯವಸ್ಥೆ ಮಾಡುತ್ತೀರಾ? ಮುಂಡರಗಿಯ ಮತ್ತೆ 6 ಕ್ಷೇತ್ರಕ್ಕೆ ಆಯುರ್ವೇದ ಆಸ್ಪತ್ರೆ ಆಲೋಪತಿ ಆಸ್ಪತ್ರೆಗಳ ಬಗ್ಗೆ ಜಿಲ್ಲಾ ಪರಿಷತ್ತಿಗೆ ಬಂದರೂ ಮಂಜೂರ್ಮಾಡಿಲ್ಲ. ಅದಕ್ಕೆ ದಯವಿಟ್ಟು ಈ ವರ್ಷವಾದರೂ ಮಂಜೂರ್ಮಾಡಿಕೊಡುತ್ತೀರಾ?

ಡಾ|| ಎ.ಬಿ. ಮಾಲಕರೆಡ್ಡಿ : ಪರಿಶೀಲನೆಯಲ್ಲಿದೆ.

ಶ್ರೀ ಎಸ್.ಎಸ್. ಪಾಟೀಲ್ : ಅಧ್ಯಕ್ಷರೇ, ಪರಿಶೀಲನೆಯಲ್ಲಿದೆ ಎಂದು ಹೇಳುವುದಕ್ಕಿಂತ ದಯವಿಟ್ಟು ನೇರವಾಗಿ ಹೇಳಲಿ.

ಶ್ರೀ ಕೆ. ಶ್ರೀನಿವಾಸಗೌಡ : ಕೋಲಾರದಲ್ಲಿ ಈಗ್ಗೆ 6 ತಿಂಗಳ ಹಿಂದೆ ಒಂದು ಆಯುರ್ವೇದಿಕ್ ಆಸ್ಪತ್ರೆ ಮಂಜೂರಾಯಿತು. ಆದರೆ, ಇದುವರೆಗೂ ಅದನ್ನು ಪ್ರಾರಂಭ ಮಾಡಿಲ್ಲ. ಕಾರಣ ಏನು ಇರಬಹುದು ಗೊತ್ತಿಲ್ಲಾ. ಸಂಬಂಧಪಟ್ಟ ಅಧಿಕಾರಿಗಳು ಇದಕ್ಕೆ ಸಂಬಂಧಿಸಿದ ಆದೇಶಗಳನ್ನು ನನಗೆ ತಂದುಕೊಟ್ಟರು. ಅದನ್ನು ಈವರೆಗೂ ಕೋಲ್ಡ್ ಸ್ಟೋರೇಜ್‌ನಲ್ಲಿಯೇ ಇಟ್ಟಿದ್ದೀರೋ ಏನೋ ಗೊತ್ತಿಲ್ಲ. ಏಕೆ ಇಷ್ಟು ನಿಧಾನವಾಗುತ್ತಿದೆ ಎಂಬುದನ್ನು ದಯವಿಟ್ಟು ಆರೋಗ್ಯ ಸಚಿವರು ಹೇಳಬೇಕು.

ಶ್ರೀ ಸಿ. ಭೈರೇಗೌಡ : ಕೋಲಾರಕ್ಕೆ ಈಗಾಗಲೇ ಆದೇಶವಾಗಿರುತ್ತದೆ. ತಾವು ಆದೇಶವನ್ನು ಕಳುಹಿಸಬೇಕಾದ ಅವಶ್ಯಕತೆ ಇಲ್ಲ. ಅಲ್ಲಿ ಆಸ್ಪತ್ರೆಯನ್ನು ಪ್ರಾರಂಭ ಮಾಡಿಲ್ಲ, ವೈದ್ಯರನ್ನು ಹಾಕಿಲ್ಲ, ಇವತ್ತು ಅಲ್ಲೆ ಆಸ್ಪತ್ರೆಯೇ ಇಲ್ಲ. ಬರೀ ಕಾಗದದ ಮೇಲೆ ಆಸ್ಪತ್ರೆ ಇದೆ. ಅದನ್ನು ಮಾನ್ಯ ಸದಸ್ಯರು ಕೇಳುತ್ತಾ ಇದ್ದಾರೆ.

ಡಾ|| ಎ.ಬಿ. ಮಾಲಕರೆಡ್ಡಿ : ಯಾವಾಗ ಪ್ರಾರಂಭವಾಗುತ್ತದೆಂದರೆ, ಹೆಡ್ ಆಫ್ ಅಕೌಂಟ್‌ನಲ್ಲಿ ಜಿಲ್ಲಾಪರಿಷತ್ತಿನವರು ಹಣ ಒದಗಿಸಿಕೊಟ್ಟಾಗ ಮಾತ್ರ ಸರ್ಕಾರ ಪ್ರಾರಂಭ ಮಾಡುತ್ತದೆ. ಇಲ್ಲದೇ

ಹೋದರೆ ಪ್ರಾರಂಭ ಮಾಡುವುದಕ್ಕಾಗುವುದಿಲ್ಲ. ಕಾನೂನಿನ ಪ್ರಕಾರ ಜಿಲ್ಲಾಪರಿಷತ್ತಿನವರು ಹಣವನ್ನು ಒದಗಿಸಿಕೊಡಬೇಕಾಗುತ್ತದೆ, ಆದರೆ ಅಲ್ಲಿ ಅವರು ಹಣವನ್ನೇ ಒದಗಿಸಿಕೊಟ್ಟಿಲ್ಲ, ಶಿಫಾರಸ್ ಮಾಡಿ ಸರ್ಕಾರಕ್ಕೆ ಕಳುಹಿಸಿದರೆ ಹೇಗೆ ಮಾಡುವುದಕ್ಕಾಗುತ್ತದೆ?

ಶ್ರೀ ಕೆ. ಶ್ರೀನಿವಾಸಗೌಡ : ಅವರಿಂದ ಹಣ ಕೊಡುವುದಕ್ಕಾಗಲಿಲ್ಲವೆಂದರೆ, ಸ್ಯಾಂಕ್ಷನ್ಸ್ ಮಾಡುವುದರಿಂದ ಉಪಯೋಗ ಏನಿದೆ?

ಶ್ರೀ ಬಿ.ಆರ್. ಯಾವಗಲ್ : ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಸುಮಾರು ಕಾಲದಿಂದ ಮಂಜೂರಾತಿ ಮಾಡುತ್ತಾ ಬಂದಿದ್ದಾರೆ. ಕೆಲವು ಕಡೆ ಆಲೋಪತಿ ಆಸ್ಪತ್ರೆಗಳು ಪಿ.ಹೆಚ್.ಸಿ.ಗಳೇ ಇರುತ್ತವೆ, ಕಮ್ಯುನಿಟಿ ಹೆಲ್ತ್ ಸೆಂಟರುಗಳೇ ಇರುತ್ತವೆ. ಅಲ್ಲಿಯೇ ಆಯುರ್ವೇದ ಆಸ್ಪತ್ರೆಯನ್ನು ಮಂಜೂರ್ಮಾಡುವಂಥಾದ್ದು ಬರುತ್ತದೆ. ಆಮೇಲೆ ಹಲವಾರು ಕ್ಷೇತ್ರಗಳಲ್ಲಿ, ಎಲ್ಲಿ ಆಸ್ಪತ್ರೆ ಕೊಟ್ಟಿದ್ದಾರೋ ಅಲ್ಲಿಯೇ ಮಂಜೂರಾತಿ ಮಾಡುವಂಥಾದ್ದು ನಡೆಯುತ್ತಾ ಇದೆ. ಇದಕ್ಕೆ ಯಾವುದಾದರೂ ಸೂತ್ರ ಉಂಟೇ. ರೋಣ ತಾಲ್ಲೂಕಿನಲ್ಲೂ ನನ್ನ ಕ್ಷೇತ್ರದ ಹಳ್ಳಿಗಳು ಬರುವುದರಿಂದ ತಾವೇನು ಪ್ರಸ್ತಾವನೆ ಬರಬೇಕೆಂದು ಹೇಳುತ್ತಾ ಇದ್ದೀರಿ. ಪ್ರಸ್ತಾವನೆ ಬಂದರೆ, ಅದು ಮಂಜೂರಾತಿ ಆದ ಹಾಗೆಯೇ ಎಂಬುದನ್ನು ದಯವಿಟ್ಟು ಮಾನ್ಯ ಸಚಿವರು ತಿಳಿಸಬೇಕು.

ಡಾ॥ ಎ.ಬಿ. ಮಾಲಕರೆಡ್ಡಿ : ರಾಜ್ಯದ 27 ಜಿಲ್ಲೆಗಳಿಂದಲೂ ಪ್ರಸ್ತಾವನೆ ಬರುತ್ತಾ ಇವೆ. ಆ ಪ್ರಸ್ತಾವನೆ ಜೊತೆಗೆ ಎಷ್ಟು ಹಣ ಒದಗಿಸಿಕೊಟ್ಟಿದ್ದಾರೆಂಬುದು ಮಾತ್ರ ಬರುವುದಿಲ್ಲ. ಅದಕ್ಕಾಗಿ ನಿರ್ದಿಷ್ಟವಾಗಿ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಎಸ್.ಎಸ್. ಪಾಟೀಲರ ಪ್ರಶ್ನೆಗೆ ಉತ್ತರವಾಗಿ, ತಾತ್ಪುರ್ತಿಕ ನೇಮಕಾತಿ ಹೊಂದಿದಂಥ ವೈದರು ಡ್ಯೂಟಿ ಮಾಡುವುದಿಲ್ಲ, ಖಾಯಂ ನೇಮಕ ಯಾವಾಗ ಮಾಡುತ್ತೀರಿ ಎಂದು ಕೇಳಿದ್ದಾರೆ. ನಾನು ಹೇಳುವಂಥಾದ್ದು ಖಾಯಂ ನೇಮಕಾತಿ ಕತೆಯೇ. ಈಗಾಗಲೇ 573 ಜನರನ್ನು ನೇಮಕ ಮಾಡಿದ್ದೇವೆ. ಅದರಲ್ಲಿ 403 ಜನ ಮಾತ್ರ ರಿಪೋರ್ಟ್ ಮಾಡಿಕೊಂಡಿದ್ದಾರೆ. ಜಿಲ್ಲಾ ಆರೋಗ್ಯಾಧಿಕಾರಿಗಳ ಕಛೇರಿಯಲ್ಲಿ ರಿಪೋರ್ಟ್ ಮಾಡಿಕೊಂಡಿದ್ದಾರೆ. ಆದರೆ, ಅವರನ್ನು ಯಾವ ಪ್ರೈಮರಿ ಹೆಲ್ತ್ ಸೆಂಟರಿಗೆ ಪೋಸ್ಟ್ ಮಾಡಿದ್ದಾರೆ, ಅಲ್ಲಿಗೆ ಯಾರು ಹೋಗಿಲ್ಲ. ಉದಾಹರಣೆಗೆ ಗುಲ್ಬರ್ಗಾದಲ್ಲಿ 40 ವೇಕೆನ್ಸಿ ಇದ್ದವು, ಅಲ್ಲಿಗೆ 40 ಖಾಯಂ ಡಾಕ್ಟರುಗಳನ್ನು ಪೋಸ್ಟ್ ಮಾಡಿದ್ದೇವೆ. ಆದರಲ್ಲಿ ಪ್ರೈಮರಿ ಹೆಲ್ತ್ ಸೆಂಟರಿಗೆ ಹೋಗಿ ಕೆಲಸ ಮಾಡತಕ್ಕಂಥವರು ಕೇವಲ 10 ಜನ ಮಾತ್ರ. ಜಿಲ್ಲಾ ಆರೋಗ್ಯಧಿಕಾರಿಗಳ ಕಛೇರಿಯಲ್ಲಿ ರಿಪೋರ್ಟ್ ಮೌಡಿಕೊಂಡರು, ಆದರೆ, ಅವರಿಗೆ ಎಲ್ಲಿ ಸ್ಥಾನ ನಿಯುಕ್ತಿ ಮಾಡಲಾಗಿತ್ತು, ಅಲ್ಲಿ ಹೋಗಿ ಕೆಲಸ ಮಾಡುತ್ತಾ ಇಲ್ಲ. ಕೇವಲ 250 ಜನ ಮಾತ್ರ ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಕೆಲಸ ಮಾಡುತ್ತಿದ್ದಾರೆ. ಸುಮಾರು 300 ಸ್ಥಳಗಳು ಹಾಗೆಯೇ ವೇಕೆಂಟ್ ಇವೆ. ಅದಕ್ಕಾಗಿ ಪುನಃ ನಾವು ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ. ಅವರು ಕಾಯತಕ್ಕ ಅವಶ್ಯಕತೆ ಇಲ್ಲ, ತಕ್ಷಣ ಅವರು ತಾತ್ಪುರ್ತಿಕ ನೇಮಕಾತಿ ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ. ಈ ನಿರ್ದೇಶನ ಭಾರತೀಯ ವೈದ್ಯಶಾಸ್ತ್ರಕ್ಕೂ ಅಪ್ಲೈ ಆಗುತ್ತದೆ.

ಶ್ರೀ ಬಿ.ಆರ್. ಯಾವಗಲ್ : ನೀವೇನು ಮಂಜೂರಾತಿ ಮಾಡುತ್ತೀರಿ, ಇದಕ್ಕೆ ಏನಾದರೂ ಕ್ರೈಟೀರಿಯಾ ಉಂಟೇ?

ಡಾ|| ಎ.ಬಿ. ಮಾಲಕರೆಡ್ಡಿ : ಅಧ್ಯಕ್ಷರೇ, ಕ್ಟೆಟೀರಿಯಾಕ್ಕೆ ಯಾರು ಬದ್ಧರಾಗಿರುವುದಿಲ್ಲ. ಒತ್ತಾಯದ ಮೇರೆಗೆ? ತೆಗೆದುಕೊಂಡಿರುತ್ತಾರೆ. ಈ ಸರ್ಕಾರ ಬಂದ ಮೇಲೆ ಅದನ್ನು ಸ್ವಲ್ಪ ನಿಯಂತ್ರಣ ಮಾಡಿದ್ದೇವೆ. ಮೊದಲು ಯಾರು ಪ್ರಭಾವ ಹೆಚ್ಚಿತ್ತೋ ಅವರೆಲ್ಲಾ ತೆಗೆದುಕೊಂಡಿದ್ದಾರೆ. ತಾವು ಹೇಳಿದ ಹಾಗೆ ಜನಸಂಖ್ಯೆ ಆಧಾರದ ಮೇಲೆ ಕೊಡಬೇಕು. ಅಲೋಪತಿಯಲ್ಲಿ 25 ಸಾವಿರ ಜನಸಂಖ್ಯೆಗೆ ಒಂದು ಆರೋಗ್ಯ ಕೇಂದ್ರ ಕೊಡಬೇಕೆಂದು ಇದೆ. ಆ ನಾರ್ಮ್ಸನ್ನು ಯಾರು ಫಾಲೋ ಮಾಡುತ್ತಾ ಇಲ್ಲ. ಸರ್ಕಾರ ಇದರ ಬಗ್ಗೆ ಸೀರಿಯಸ್ಸಾಗಿ ಲಕ್ಷ್ಯ ವಹಿಸಿ, ಈ ವರ್ಷ ಯಾವುದೇ ಆರೋಗ್ಯ ಕೇಂದ್ರವನ್ನು ಕೊಟ್ಟಿಲ್ಲ. ಕಾರಣ ಇಷ್ಟೆ, ಕರ್ನಾಟಕ ರಾಜ್ಯದಲ್ಲಿ, ಈಗಾಗಲೇ 15 ಸಾವಿರ ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಇದೆ. ಅಂದರೆ, ರಾಷ್ಟ್ರಮಟ್ಟಕ್ಕಿಂತಲೂ ನಾವು ಬಹಳಷ್ಟು ಮುಂದೆ ಹೋಗಿದ್ದೇವೆ. ಅದಕ್ಕೆ ಹೆಚ್ಚು ಹೆಚ್ಚು ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡುವ ಅಗತ್ಯ ಇಲ್ಲ. ಇದ್ದ ಆರೋಗ್ಯ ಕೇಂದ್ರಗಳನ್ನೇ ನಾವು ಭದ್ರಪಡಿಸಿದ್ದೇವೆ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ : ಸ್ವಾಮಿ, ಈ ರಾಜ್ಯದಲ್ಲಿ ಎಷ್ಟು ಆಯುರ್ವೇದಿಕ್ ಆಸ್ಪತ್ರೆಗಳಿವೆ, ಈ ಆಸ್ಪತ್ರೆಗಳಲ್ಲಿ 10 ವರ್ಷಗಳಿಂದ ಡಾಕ್ಟರುಗಳನ್ನು ನೇಮಕ ಮಾಡದೇ ಇರತಕ್ಕಂಥ ಘಟನೆಗಳು ಇದ್ದರೂ ಕೂಡ, ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಬಂದಿದ್ದರೆ, ನೀವೇನು ಕ್ರಮ ತೆಗೆದುಕೊಂಡಿದ್ದೀರಿ? ಎರಡನೆಯದು 573 ವೈದ್ಯರುಗಳನ್ನು ನೇಮಕಾತಿ ಮಾಡಿದ್ದು ಅದರಲ್ಲಿ ಕೇವಲ ಇನ್ನೂರು ಚಿಲ್ಲರೆ ವೈದ್ಯರು ಮಾತ್ರ ಡ್ಯೂಟಿ ರಿಪೋರ್ಟ್ ಮಾಡಿಕೊಂಡಿದ್ದಾರೆ ಎಂದು ಹೇಳಿದ್ದೀರಿ. ಮತ್ತೊಮ್ಮೆ ನೀವು ಕರೆದು ಹಳ್ಳಿಗಾಡಿನಲ್ಲಿ ಕೆಲಸ ಮಾಡತಕ್ಕಂಥವರಿಗೆ, ಕೆಲಸ ಕೊಡಲಿಕ್ಕೆ ಏನಾದರೂ ವ್ಯಾವಸ್ಥೆ ಮಾಡುತ್ತೀರಾ?

ಅಧ್ಯಕ್ಷರು : ಜಿಲ್ಲಾಧಿಕಾರಿಗಳಿಗೆ ಬರೆದಿದ್ದೇವೆಂದೂ, ಅವರು ಕೊಡತ್ತಾರೆಂದು ಹೇಳಿದ್ದಾರೆ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೇ, 2000-01ನೇ ಸಾಲಿನಲ್ಲಿ ಇಡೀ ರಾಜ್ಯದಲ್ಲಿ 1 ಜಿಲ್ಲಾಮಟ್ಟದ ಹಾಗೂ 5 ತಾಲ್ಲೂಕು ಮಟ್ಟದ ಆಯುರ್ವೇದ ಆಸ್ಪತ್ರೆಗಳನ್ನು ತೆರೆಯಲು ಅನುಮತಿ ನೀಡಿದೆ ಎಂದು ಇಲ್ಲಿ ಕಾಣಿಸಿದ್ದಾರೆ. ಆ ಐದು ತಾಲ್ಲೂಕುಗಳು ಯಾವುದು ಎಂದು ಕೇಳಬಹುದೇ? ನನ್ನ ಕ್ಷೇತ್ರವಾದಂಥ ಆಲೂರು ತಾಲ್ಲೂಕಿನಲ್ಲಿ ಒಂದು ಆಸ್ಪತ್ರೆಯನ್ನು ಕೇಳಿದ್ದೆ. ಅದು ಮಂಜೂರು ಆಗಲಿಲ್ಲ. ಆ ಆಸ್ಪತ್ರೆಗೆ ಜಾಗ ಮತ್ತು ಒಂದು ಲಕ್ಷ ರೂಪಾಯಿ ವಂತಿಕೆ ಕೂಡ ಕೊಡುತ್ತೇವೆಂದು ಅವರಿಗೆ ಪತ್ರ ಕೂಡ ಬರೆದಿದ್ದೆ. ಜಿಲ್ಲಾ ಪಂಚಾಯ್ತಿಯಿಂದ ಕೂಡ ಶಿಫಾರಸ್ ಆಗಿ ಬಂದಿದೆ. ಆದರೆ, ಅಲ್ಲಿಗೆ ಆಸ್ಪತ್ರೆ ಕೊಡಲಿಲ್ಲ. ಈಗ ಮಾನ್ಯ ಸಚಿವರು ಪೋಸ್ಟಿಂಗ್ ಮಾಡಿದ ಡಾಕ್ಟರುಗಳು ಬರಲಿಲ್ಲವೆಂದು ಹೇಳುತ್ತಿದ್ದಾರೆ. ನಾವು ಡಾಕ್ಟರನ್ನು ಕೊಡುತ್ತೇವೆ, ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ, ನಮಗೆ ಒಂದು ಆಸ್ಪತ್ರೆ ಕೊಡಬಹುದೇ?

ಡಾ|| ಎ.ಬಿ. ಮಾಲಕರೆಡ್ಡಿ : ಸರ್ಕಾರ ತಾತ್ವಿಕವಾಗಿ, ಒಂದು ಜಿಲ್ಲಾ ಆಸ್ಪತ್ರೆ ಮತ್ತು 4 ತಾಲ್ಲೂಕು ಆಸ್ಪತ್ರೆಗಳಿಗೆ ಅನುಮತಿ ಕೊಟ್ಟಿದೆ. ಯಾವ ತಾಲ್ಲೂಕು ಎಂಬುದು ಇಲ್ಲಿ ಇಲ್ಲ. ಆಯಾ ಜಿಲ್ಲಾ ಪಂಚಾಯ್ತಿಯವರು, ಯಾರೂ ಸಾಕಷ್ಟು ಒದಗಿಸಿಕೊಟ್ಟಿರುತ್ತಾರೆ, ತಾವು ಹೇಳಿದಹಾಗೆ ಕೆಲವು

ಜಿಲ್ಲಾ ಪಂಚಾಯ್ತಿಗಳವರು ಕಟ್ಟಡವನ್ನೂ ನಾವು ಕಟ್ಟಿಕೊಡುತ್ತೇವೆಂದು ಹೇಳುತ್ತಾರೆ. ಕೆಲವು ತಾಲ್ಲೂಕಿನಲ್ಲಿ ಕೇವಲ 2 ಲಕ್ಷ ರೂಪಾಯಿಗಳನ್ನು ಒದಗಿಸಿಕೊಟ್ಟಿದ್ದಾರೆ. ತಾವು ಡಾಕ್ಟರನ್ನೂ ಕೊಡಲಿಕ್ಕೆ ತಯಾರಿದ್ದೀರಿ. ಆದರೆ, ಆ ರೀತಿ ಸರ್ಕಾರದವರು ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ಏಕೆಂದರೆ, ನಮ್ಮಲ್ಲಿ ರಿಸರ್ವೇಷನ್ ಪಾಲಿಸಿ ಇದೆ, ಮೆರಿಟ್ ಪಾಲಿಸಿ ಇದೆ. ಆ ಆಧಾರದ ಮೇಲೆ ನಾವು ನೇಮಕಾತಿ ಮಾಡಬೇಕಾಗುತ್ತದೆ. ಅದಕ್ಕಾಗಿ ಎಂತಹ ತಾಲ್ಲೂಕು ಎಂಬುದು ನಿರ್ದಿಷ್ಟ ಆಗಿಲ್ಲ. ರೋಣ ತಾಲ್ಲೂಕಿಗೆ ನಾವು ಹಣವನ್ನೂ ಕೊಡುತ್ತೇವೆ, ಕಟ್ಟಡವನ್ನೂ ಕೊಡುತ್ತೇವೆಂದು ಪಾಟೀಲರು ಹೇಳಿದರು. ಹಾಗಿದ್ದರೆ ರೋಣಕ್ಕೆ ಕೊಟ್ಟೇ ಕೊಡುತ್ತೇವೆ. ಅದೇ ರೀತಿ ತಮಗೂ ಕೂಡ ಕೊಡುತ್ತೇವೆ.

ರಾಜೀವ್ ಗಾಂಧಿ ಕುಡಿಯುವ ನೀರಿನ ಯೋಜನೆ

409 - ಶ್ರೀ ಜಸವರಾಜು ಹೆಚ್.ಸಿ. (ಪಿರಿಯಾಪಟ್ಟಣ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜೀವ್‌ಗಾಂಧಿ ಕುಡಿಯುವ ನೀರಿನ (Rajiv Gandhi Foundation Water Scheme ವತಿಯಿಂದ) ಯೋಜನೆ ಅನ್ವಯ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಸೌಲಭ್ಯ ಕಲ್ಪಿಸಲಾಗಿದೆ ?*

ಆ) *ಈ ಯೋಜನೆ ಅನುಷ್ಠಾನಗೊಳಿಸುವಲ್ಲಿ ಸರ್ಕಾರ ಮಂದಗತಿಯಿಂದ ಸಾಗುತ್ತಿರುವುದು ನಿಜವೇ?*

ಇ) *ಗ್ರಾಮಸ್ಥರು ಶೇ.10ರಷ್ಟು ವಂತಿಗೆ ಕೊಡಲು ಮುಂದೆ ಬಂದಿರುವ ಕಡೆ ಕೆಲಸ ಪ್ರಾರಂಭಿಸಲು ಎಷ್ಟು ಸಮಯ ಬೇಕು?*

ಈ) *ಈ ಯೋಜನೆಯ ಅವಧಿ ಎಲ್ಲಿಯವರೆಗೆ ಇದೆ ?*

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :

ಅ) ಕೇಂದ್ರ ಸರ್ಕಾರದಿಂದ ಮಂಜೂರಾದ ಸಮುದಾಯ ಆಧಾರಿತ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಕಾರ್ಯಕ್ರಮದಡಿ ರಾಜ್ಯದಲ್ಲಿ 3 ಜಿಲ್ಲೆಗಳು (1. ಮೈಸೂರು 2. ದಕ್ಷಿಣ ಕನ್ನಡ ಮತ್ತು 3. ಬಳ್ಳಾರಿ) ಆಯ್ಕೆಯಾಗಿದ್ದು, ಸದರಿ ಕಾರ್ಯಕ್ರಮದಡಿ ಕಾಮಗಾರಿಗಳನ್ನು ಇನ್ನೂ ಅನುಷ್ಠಾನಗೊಳಿಸಬೇಕಾಗಿದೆ.

ಆ) ಈ ಯೋಜನೆಯ ಉದ್ದೇಶ ಕೇವಲ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದು ಮಾತ್ರವಾಗಿರದೆ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಲಯಗಳಲ್ಲಿ ಸುಧಾರಣೆಗಳನ್ನು ತರುವುದಾಗಿರುತ್ತದೆ. ಆದ್ದರಿಂದ ಮೊದಲು ಗ್ರಾಮೀಣ ಜನರಲ್ಲಿ ಅರಿವು ಮೂಡಿಸಿ, ಅವರ ಭಾಗವಹಿಸುವಿಕೆಯೊಂದಿಗೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ. ಅದೇ ಪ್ರಕಾರ. ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸರ್ಕಾರದಿಂದ ಕ್ರಮ ಕೈಗೊಳ್ಳಲಾಗುತ್ತಿದೆ.